## ಹೆಸರು ಯಾಕೆ ಹೇಳಬೇಕು?:

ಹೀಗೆ ಯಾರದೋ ಹೆಸರು ಹೇಳುವುದರಿಂದ ಪ್ರಯೋಜನ ಏನು ಎಂದು ಕೇಳಬಹುದು. ಯಾವುದೇ ಹೆಣ್ಣಿಗೆ ಯಾರೊಬ್ಬರ ಮೇಲೂ ವೈಯಕ್ತಿಕ ದ್ವೇಷ ಇರುವುದಕ್ಕೆ ಸಾಧ್ಯವಿಲ್ಲ. ಆಗಿದ್ದು ಆಗಿಹೋಗಿದೆ. ತನಗೆ ಎದುರಾದ ಆ ಕೆಟ್ಟ ಅನುಭವವನ್ನು ದಾಟಿ ಬಂದಾಗಿದೆ. ಆದರೆ ವೈಯಕ್ತಿಕ ಮಟ್ಟವನ್ನು ಮೀರಿ ಇನ್ನೂ ವಿಸ್ತಾರವಾದ ದೃಷ್ಟಿಕೋನದಲ್ಲಿ ಅದನ್ನು ನೋಡಬೇಕು. ಮೊದಲನೆಯದಾಗಿ, ಹೀಗೆ ಹೆಸರು ಹೇಳಿ ಕಥೆಯನ್ನು ಉಲ್ಲೇಖಿಸುವುದರಿಂದ ಆ ಗಂಡಸು ಮತ್ತೊಮ್ಮೆ ಇಂಥ ಕೆಲಸ ಮಾಡಲು ಖಂಡಿತ ಹಿಂಜರಿಯುತ್ತಾನೆ. ಹೀಗೆ ಹೆಸರು ಉಲ್ಲೇಖಿಸಿ, ತಾನು ಹಾದುಬಂದ ಶೋಷಣೆಯ ಕಥೆ ಹೇಳುವುದರ ಮೂಲಕ ತನ್ನಂಥದೇ ಇನ್ನೊಂದು ಹೆಣ್ಣಿನ ಮೇಲೆ ನಡೆಯಬಹುದಾದ ಶೋಷಣೆಯನ್ನೂ ಅವರು ತಪ್ಪಿಸುತ್ತಿದ್ದಾರೆ. ಹಾಗೆಯೇ, ಇನ್ನೊಮ್ಮೆ ಯಾವುದೇ ಪುರುಷ ಹೆಣ್ಣಿನ ಖಾಸಗಿ ಜಗತ್ತಿನೊಳಗೆ ಅತಿಕ್ರಮವಾಗಿ ಪ್ರವೇಶಿಸುವುದಕ್ಕೂ ಮುನ್ನ ಎರಡೆರಡು ಸಲ ಯೋಚಿಸುತ್ತಾನೆ. ಅಂದರೆ ಹೆಣ್ಣಿನ ಕುರಿತಾಗಿ ಅವನಲ್ಲಿ ಇರುವ ದೃಷ್ಟಿಕೋನವನ್ನೇ ಮರು ಪರಿಶೀಲಿಸಿಕೊಳ್ಳುವಂತೆ ಈ ಅಭಿಯಾನ ಒತ್ತಾಯಿಸುತ್ತದೆ.

ಎ.ಜೆ. ಅಕ್ಬರ್ ಅವರಂಥ ಪ್ರಭಾವಿ ರಾಜಕಾರಣಿ, ಪ್ರತಿಭಾವಂತರಾದ ವೈರಮುತ್ತು, ರಘು ದೀಕ್ಷಿತ್ ಅವರಂಥ ಕಲಾವಿದರ ಹೆಸರುಗಳೂ ಈ ಅಭಿಯಾನದಲ್ಲಿ ಬಹಿರಂಗಗೊಂಡಿದೆ. ಇದರಿಂದ ಇನ್ನೊಮ್ಮೆ ಯಾರಾದರೂ ಇಂಥ ಕೆಲಸ ಮಾಡುವ ಮುನ್ನ ಎರಡು ಸಲ ಯೋಚಿಸುತ್ತಾರೆ. ಇದಕ್ಕೆ ಬೆಲೆ ತೆರಲೇಬೇಕಾಗುತ್ತದೆ ಎಂಬ ಭಯ ಹುಟ್ಟಿಕೊಳ್ಳುತ್ತದೆ.

ನಮ್ಮ ಸಮಾಜದಲ್ಲಿನ ವ್ಯವಸ್ಥೆ ಹೇಗಿದೆ ಎಂದರೆ – ಲೈಂಗಿಕ ಕಿರುಕುಳ, ಅತ್ಯಾಚಾರಗಳಾದಾಗ ಬಹುತೇಕ ಸಂದರ್ಭಗಳಲ್ಲಿ ಹೆಣ್ಣು ಅದರ ಬಗ್ಗೆ ಮಾತನಾಡಲು ನಾಚಿಕೊಳ್ಳುತ್ತಾಳೆ. ಶೋಷಣೆಗೊಳಗಾದವಳು ಅವಳು, ನೊಂದವಳು ಅವಳು. ಅವಳ್ಯಾಕೆ ನಾಚಿಕೊಳ್ಳಬೇಕು? ತನಗಾದ ಯಾತನೆಯ ಕುರಿತು ಮಾತನಾಡುವುದೂ ಮರ್ಯಾದೆಹೀನ ಕೆಲಸ ಎಂದು ಈ ಜಗತ್ತು ಅವಳನ್ನು ನಂಬಿಸಿದೆ. ಇದು ನಮ್ಮ ನಾಗರಿಕ ಸಮಾಜದ ಬಹುದೊಡ್ಡ ವ್ಯಂಗ್ಯ. ಇಂಥ ಸಂದರ್ಭಗಳಲ್ಲಿ ನಿಜವಾಗಲೂ ನಾಚಿಕೆಯಾಗಬೇಕಾಗಿದ್ದು ಗಂಡಸಿಗೆ.

ತನ್ನನ್ನು ಶೋಷಿಸಿದ ವ್ಯಕ್ತಿಯ ಹೆಸರು ಹೇಳುವುದರಿಂದ ಆಕೆಗೆ ಪೂರ್ತಿ ನ್ಯಾಯ ಸಿಗುತ್ತದೆಯೇ? ಸಿಗದಿರಬಹುದು. ಆದರೆ ತಾನೇನೇ ಮಾಡಿದರೂ ಹೆಣ್ಣು ಸಹಿಸಿಕೊಂಡು ಸುಮ್ಮನಿರುತ್ತಾಳೆ ಎಂಬ ಪುರುಷ ಅಹಂಕಾರವನ್ನು ಒಡೆಯುವ ನಿಟ್ಟಿನಲ್ಲಿ 'ಮಿ ಟೂ' ಅಭಿಯಾನ ತುಂಬ ಮಹತ್ವದ್ದು.

## ಕಥೆ ಹೇಳುವುದು ಸುಲಭವೇ?

ಈ ಸಮಸ್ಯೆಯನ್ನು ಇನ್ನಷ್ಟು ಹತ್ತಿರದಿಂದ ನೋಡೋಣ. ಇಷ್ಟೆಲ್ಲ ಮಾತನಾಡುವ ನಾನು ಯಾಕೆ 'ಮಿ ಟೂ' ಅಭಿಯಾನದಲ್ಲಿ ಭಾಗವಹಿಸಿ ನನಗಾದ ಅನುಭವವನ್ನು ಹಂಚಿಕೊಂಡಿಲ್ಲ ಎನ್ನುವ ಒಂದು ಪ್ರಶ್ನೆ ಹುಟ್ಟಿಕೊಳ್ಳಬಹುದು. ನನಗೆ ಅಂಥ ಅನುಭವಗಳೇ ಆಗಿಲ್ಲವೇ? ಆಗಿವೆ. ಹಾಗಾದಾಗ ಸಾಕಷ್ಟು ಭಯಪಟ್ಟಿದ್ದೇನೆ. ಆ ಘಟನೆಗಳನ್ನು ಹಂಚಿಕೊಳ್ಳಲಿಕ್ಕೆ ನಾಚಿಕೆಯೇ? ಖಂಡಿತ ನನಗೆ ಆ ವಿಷಯದಲ್ಲಿ ನಾಚಿಕೆ–ಹಿಂಜರಿಕೆ ಇಲ್ಲ. ಅದೊಂದು ಕೆಟ್ಟ ಅನುಭವ. ನಾನು ಅದರಿಂದ ಬಹುಬೇಗನೇ ಹೊರಬಂದಿದ್ದೇನೆ. ಅಂಥ ಅನುಭವಗಳು ನನ್ನನ್ನು ದುರ್ಬಲಳನ್ನಾಗಿಸಿಲ್ಲ. ನಾನೀಗಲೂ ಸಮರ್ಥಳು ಮತ್ತು ಶೋಷಣೆಯ ವಿರುದ್ಧ ಪ್ರತಿಭಟಿಸುವಷ್ಟು ಶಕ್ತಳೂ ಹೌದು.

ಈ ಬರಹವನ್ನು ಬರೆಯುತ್ತಿರುವಾಗ ನನ್ನೆದುರು ಎರಡು ಆಯ್ಕೆಗಳಿದ್ದವು. ಒಂದು, ನನ್ನನ್ನು ಶೋಷಿಸಿದ ಕೆಲವು ಖ್ಯಾತನಾಮ ವ್ಯಕ್ತಿಗಳ ಹೆಸರನ್ನು ಹಂಚಿಕೊಳ್ಳುವುದು, ಇಲ್ಲವೇ ಹೆಸರು ಹೇಳದೆ ಬರೆಯುವುದು. ನನಗೆ ಖಚಿತವಾಗಿ ಗೊತ್ತಿದೆ, ಆ ವ್ಯಕ್ತಿಗಳು ಈಗಾಗಲೇ ಹೆದರಿರುತ್ತಾರೆ. ಮತ್ತೊಮ್ಮೆ ಇಂಥ ಕೆಲಸ ಮಾಡಲಾರರು ಎಂದೂ ಅನಿಸುತ್ತದೆ.

ಖ್ಯಾತನಾಮರೊಬ್ಬರು ನನ್ನೊಂದಿಗೆ ನಡೆದುಕೊಂಡ ರೀತಿ ನಿಜಕ್ಕೂ ಕೆಟ್ಟದಾಗಿತ್ತು. ಅವರು ಬಳಸಿದ ಭಾಷೆ, ವರ್ತನೆ ಇವನ್ನೆಲ್ಲ ಸಹಿಸಿಕೊಂಡು ಕೆಲಸ ಮಾಡುವುದೂ ತುಂಬ ಕಠಿಣ ಅನಿಸಿತ್ತು. ಇದೊಂದು ಕೆಟ್ಟ ಅನುಭವ. ಆದರೆ ಇದನ್ನೇ ಇಟ್ಟುಕೊಂಡು ನಾನು ಅಳುತ್ತ ಕೂಡಲಿಲ್ಲ. ನನ್ನ ಕೆಲಸವನ್ನು ಮುಗಿಸಿ ಅಲ್ಲಿಂದ ಹೊರಗೆ ಬಂದೆ ಅಷ್ಟೆ. ಆ ಖ್ಯಾತನಾಮ ವ್ಯಕ್ತಿ ಬಹಳ ಪ್ರಭಾವಿಯೂ ಹೌದು. ಒಂದೊಮ್ಮೆ ಅವರ ಹೆಸರನ್ನು ಹೇಳಿದೆ ಅಂತಿಟ್ಟುಕೊಳ್ಳಿ. ಆ ಕ್ಷಣದಿಂದ ನನಗೆ ದೂರವಾಣಿ ಕರೆಗಳು ಬರಲಿಕ್ಕೆ ಶುರುವಾಗುತ್ತವೆ. ಪತ್ರಿಕೆ, ವಾಹಿನಿಗಳವರು ಕರೆ ಮಾಡಿ ಪ್ರಶ್ನಿಸಲು ಶುರು ಮಾಡುತ್ತಾರೆ. ಮುಂದಿನ ಎರಡು ದಿನ ನಾನು ಯಾವ ಕೆಲಸವನ್ನೂ ಮಾಡದೆ ಎಲ್ಲರಿಗೂ ಉತ್ತರಿಸುತ್ತಾ ಕೂತಿರುತ್ತೇನೆ. ಅವರಿಗೆ ನನಗಾಗಿರುವ ನೋವು–ಆಘಾತ, ಶೋಷಣೆಗಿಂತ ನಾನು ಹೇಳುವ ಖ್ಯಾತನಾಮರ ಹೆಸರು ಮುಖ್ಯವಾಗಿರುತ್ತದೆ. ಅದನ್ನೆಲ್ಲ ನಾನು ಏಕೆ ಮತ್ತು ಹೇಗೆ ಸಹಿಸಿಕೊಳ್ಳುವುದು? ಹಾಗಾದರೆ ಅವರ ಹೆಸರು ಹೇಳದೆ ಸುಮ್ಮನಿರಲೇ? ನನಗೆ ಕಿರುಕುಳ ನೀಡಿದ ವ್ಯಕ್ತಿ ಮತ್ತೆ ಯಾವ ಹೆಣ್ಣಿಗೂ ಆ ರೀತಿ ತೊಂದರೆ ಕೊಡಬಾರದಲ್ಲ. ಅದನ್ನು ಅವನಿಗೆ ಮನದಟ್ಟು ಮಾಡುವುದು ಹೇಗೆ? ಗೊತ್ತಿಲ್ಲ. ಯೋಚಿಸಿದಷ್ಟೂ ಇದು ಇನ್ನಷ್ಟು ಸಂಕೀರ್ಣವಾಗುತ್ತಾ ಹೋಗುತ್ತದೆ.

## ನನ್ನ ಕಥೆ...

ತುಂಬ ಹಿಂದೆ ನನಗಾದ ಒಂದು ಅನುಭವ ಹಂಚಿಕೊಳ್ಳುತ್ತೇನೆ.

ನಾನೊಂದು ದಿನ ಕಾಲೇಜಿಗೆ ಹೋಗುತ್ತಿದ್ದೆ. ದಾರಿಯಲ್ಲಿ ಒಬ್ಬ ಲಿಫ್ಟ್ ಕೇಳಿದ. ಪಾಪ ಎಂದುಕೊಂಡು ಸ್ಕೂಟರ್ ಮೇಲೆ ಹತ್ತಿಸಿಕೊಂಡೆ. ಹಿಂದಿನ ಸೀಟಿನಲ್ಲಿ ಕೂತ ತಕ್ಷಣ ಅವನು ತನ್ನ ಕೈಗಳನ್ನು ನನ್ನ ಬಟ್ಟೆಯ ಒಳಗೆ ತೂರಿಸಿದ. ನಾನು ಕಿರುಚಾಡತೊಡಗಿದೆ. ಅಕ್ಕಪಕ್ಕದ ಜನರೆಲ್ಲ ಓಡಿಬಂದರು. ಅವನು ಗಾಡಿಯಿಂದ ಇಳಿದ. ಆ ಕ್ಷಣದಲ್ಲಿ ನನಗಾದ ಶಾಕ್‌ನಿಂದ ತತ್ತರಿಸಿಹೋಗಿದ್ದೆ. ಅವನಿಗೆ ಹೊಡೆಯುವಷ್ಟೂ ಧೈರ್ಯವೂ ಇರಲಿಲ್ಲ. ಅವನ್ಯಾರೋ ನನಗೆ ಗೊತ್ತಿಲ್ಲ. ಆದರೆ ಆ ಅನುಭವದ ಆಘಾತ ನನ್ನ ಮನಸಿನಲ್ಲಿ ಊರಿಕೊಂಡಿದೆ. ಯಾವನೋ ಅಪರಿಚಿತನಿಂದ ಶೋಷಣೆಗೆ ಒಳಗಾದಾಗಲೇ ತಕ್ಷಣಕ್ಕೆ ಪ್ರತಿಭಟಿಸಲು ಸಾಧ್ಯವಾಗಲಿಲ್ಲ. ಹೀಗಿರುವಾಗ, ಖ್ಯಾತನಾಮರು, ಪ್ರಭಾವಿಗಳ ಹೆಸರು ಹೇಳಿ ಜಯಿಸುವುದು ಸುಲಭವೇ?



'ಮಿ ಟೂ' ಅಭಿಯಾನದಲ್ಲಿ ತನ್ನ ಕಥೆಯನ್ನು ಹಂಚಿಕೊಂಡ ಗಾಯಕಿ ಚಿನ್ಮಯಿಗೆ ಎಷ್ಟು ಧೈರ್ಯವಿದೆಯಲ್ಲ ಎಂದು ಯೋಚಿಸುತ್ತಿದ್ದೆ. ಯಾಕೆಂದರೆ ಒಂದಿಬ್ಬರು ವ್ಯಕ್ತಿಗಳ ಹೆಸರನ್ನು ಹೇಳಿದ ಕಾರಣಕ್ಕೆ ಅವಳು ಎದುರಿಸುತ್ತಿರುವ ಕಿರಿಕಿರಿಗಳು, ಪ್ರಶ್ನೆಗಳು, ಅದರಿಂದ ಮನಸ್ಸಿಗೆ ಆಗುವ ನೋವು ಏನೆಂಬುದರ ಅರಿವಿದೆ ನನಗೆ. ಆದರೆ ಅದ್ಯಾವುದಕ್ಕೂ ಕುಗ್ಗದೆ ತುಂಬ ದಿಟ್ಟತನದಿಂದ ಅವಳು ಪ್ರತಿಕ್ರಿಯಿಸುತ್ತಿರುವುದನ್ನು ನೋಡಿದರೆ ಅವಳ ಬಗ್ಗೆ ಹೆಮ್ಮೆ ಅನಿಸುತ್ತದೆ.

ಚಿನ್ಮಯಿಯ ಕಥೆ ನಿಜಕ್ಕೂ ಹಲವರಿಗೆ ಸ್ಫೂರ್ತಿದಾಯಕವಾಗಿದ್ದು. ಅವಳ ಬಗ್ಗೆ ಯೋಚಿಸುತ್ತಿದ್ದಾಗ ನಾನು ಏನು ಮಾಡುತ್ತಿದ್ದೇನೆ ಎಂಬ ಪ್ರಶ್ನೆ ನನ್ನ ಮನಸಲ್ಲಿ ಬಂತು. ಈ ಅಭಿಯಾನದ ಭಾಗ ಆಗುವುದು ಅಗತ್ಯ ಅನಿಸಿತು. ನನಗಾಗಿರುವ ಇನ್ನೊಂದು ಕೆಟ್ಟ ಅನುಭವ ಹಂಚಿಕೊಳ್ಳುತ್ತೇನೆ.

ಕಳೆದ ವರ್ಷ ನಾನೊಂದು ಸಿನಿಮಾ ಮಾಡಿದೆ. ಅದರ ಹೆಸರು 'ವಿಸ್ಮಯ'. ಆ ಸಿನಿಮಾದಲ್ಲಿ ನನ್ನ ಸಹನಟನಾಗಿ ಅರ್ಜುನ್ ಸರ್ಜಾ ಅವರು ಅಭಿನಯಿಸುತ್ತಿದ್ದರು. 'ವಿಸ್ಮಯ' ಸಿನಿಮಾಗೂ ಮುನ್ನ ನಾನು ಹಲವು ಸಿನಿಮಾಗಳಲ್ಲಿ ಅಭಿನಯಿಸಿದ್ದೇನೆ. ತುಂಬ ನಟರ ಜತೆ ಕೆಲಸ ಮಾಡಿದ್ದೇನೆ. ಇಂದಿಗೂ ನನಗೆ ಬೇರೆ ನಟರ ಜೊತೆ ನಟಿಸುವಾಗ ಯಾವ ತೊಂದರೆಯೂ ಆಗಿಲ್ಲ. ನಾವೆಲ್ಲ ಪರಸ್ಪರ ಗೌರವದಿಂದಲೇ ನಡೆದುಕೊಳ್ಳುತ್ತಿದ್ದೆವು. ನಾಯಕ–ನಾಯಕಿ ನಡುವಿನ ಪ್ರಣಯದ ದೃಶ್ಯಗಳನ್ನು ಚಿತ್ರೀಕರಿಸುವಾಗ ಕಲಾವಿದರ ನಡುವೆ ಬಹುಸೂಕ್ಷ್ಮವಾದ ಒಂದು ಗಡಿರೇಖೆ ಇರುತ್ತದೆ. ಆ ಸೂಕ್ಷ್ಮವಾದ ಗಡಿಯನ್ನು ದಾಟಿದರೆ ಹೆಣ್ಣಿಗೆ ಅನ್‌ಕಂಫರ್ಟಬಲ್ ಆಗಲು ಶುರುವಾಗುತ್ತದೆ. 'ವಿಸ್ಮಯ' ಚಿತ್ರೀಕರಣದ ಸಂದರ್ಭದಲ್ಲಿ ಆ ಗಡಿರೇಖೆಯನ್ನು ಅರ್ಜುನ್ ಸರ್ಜಾ ದಾಟಿದ್ದರು.

ನಾನು ಅವರ ಹೆಂಡತಿಯಾಗಿ ನಟಿಸುತ್ತಿದ್ದೆ. ಅದರ ರಿಹರ್ಸಲ್